**Shikshan Sanshodhan : Journal of Arts, Humanities and Social Sciences** ISSN(o): 2581-6241
Monthly, Peer-Reviewed, Refereed, Indexed Journal Impact Factor: 6.471
Volume - 6, Issue - 9, September - 2023 Publication Date: 15/09/2023

DOIs:10.2018/SS/202309001 --:-- Research Paper / Article / Review

# ಕರ್ನಾಟಕದ ನಾಣ್ಯ ಪರಂಪರೆಗೆ ವಿಜಯನಗರ ಅರಸರ ಕೊಡುಗೆಗಳು "ಒಂದು ವಿಶ್ಲೇಷಣೆ"

**ಮಹೇಶ್ವರಪ್ಪ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು,
ವಿದ್ಯಾನಗರ, ಶಿವಮೊಗ್ಗ- ೫೭೭೨೦೩.
ಇಮೇಲ್ – ಟಚಿhಜತಿಚಿಡಿಚಿಠಿಠಿಚಿಛಿಚಿಛ@ಡಿಚಿಟಿ.ಛಿಡಿ

**ಪೀಠಿಕೆ:** ಕರ್ನಾಟಕ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಉದಯ ಒಂದು ಹೊಸ ಅಧ್ಯಾಯ ಹಾಗೂ ಸುವರ್ಣಯುಗ ಎಂದು ಪರಿಗಣಿಸಲಾಗಿದೆ. ಇದು ಕ್ರಿ.ಶ. ೧೩೩೬ರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಎಂಬಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲೆ ಸ್ಥಾಪಿತವಾಯಿತು. ಶ್ರೀ ವಿದ್ಯಾರಣ್ಯರ ಮಾರ್ಗದರ್ಶನ ಮತ್ತು ಆಶೀರ್ವಾದದೊಂದಿಗೆ ಹಕ್ಕ-ಬುಕ್ಕ, ಮಾರಣ್ಣ, ಕಂಪಣ ಮತ್ತು ಮುದ್ದಣ ಎಂಬ ಸಂಗಮ ವಂಶದ' ಸಹೋದರರು ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು.

ಈ ಸಾಮ್ರಾಜ್ಯವು ಪ್ರಮುಖವಾಗಿ ಹಿಂದೂ ಧರ್ಮವನ್ನು ಮುಸ್ಲಿಂ ದವಡೆಯಿಂದ ರಕ್ಷಿಸಲು ಪ್ರಾರಂಭವಾಯಿತು. ಇದು ಸಾಮಾಜಿಕ ರಕ್ಷಣೆ, ಆರ್ಥಿಕ ಸ್ಥಿರತೆ, ಧಾರ್ಮಿಕ ಪರಿವರ್ತನೆ ವಾಸ್ತುಶಿಲ್ಪದ ಬೆಳವಣಿಗೆ ಹಾಗೂ ಸಾಹಿತ್ಯದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿತು. ಇದು ತನ್ನ ಸಮಕಾಲಿನ ಬಹುಮನಿ ಸಾಮ್ರಾಜ್ಯದಿಂದ ತನ್ನ ಧರ್ಮ ರಕ್ಷಣೆ, ರಾಜ್ಯ ವಿಸ್ತಾರಕ್ಕೋಸ್ಕರ ಅನೇಕ ಯುದ್ಧಗಳನ್ನು ಮಾಡಿ ತನ್ನ ವೈಭವವನ್ನು ಬೆಳೆಸಿ ಉಳಿಸಿಕೊಂಡಿತು.

ಈ ಸಾಮ್ರಾಜ್ಯವು ಹಕ್ಕ-ಬುಕ್ಕ, ದೇವರಾಯ, ಕೃಷ್ಣದೇವರಾಯ, ಅಚ್ಯುತರಾಯ, ರಾಮರಾಯರಂಥಹ ಪ್ರಸಿದ್ಧ ರಾಜರುಗಳನ್ನು ವಿದ್ಯಾರಣ್ಯ, ಪುರಂದರದಾಸ, ಕನಕದಾಸ, ವ್ಯಾಸರಾಯರಂತಹ ಯೋಗಪುರಷರನ್ನು ನೀಡಿತು. ಈ ಸಾಮ್ರಾಜ್ಯದ ವೈಭವ ಅನೇಕ ವಿದೇಶಿ ಇತಿಹಾಸಕಾರರನ್ನು ಆಕರ್ಷಿಸಿ ತನ್ನ ಪ್ರಾಬಲ್ಯವನ್ನು ಹೊರದೇಶಗಳಲ್ಲಿಯೂ ಮೊಳಗಿಸಿತು.

ವಿಜಯನಗರ ಸಾಮ್ರಾಜ್ಯದ ವೈಭವ ಮತ್ತು ಪ್ರಾಬಲ್ಯ ಬಹುಮನಿ ಸಾಮ್ರಾಜ್ಯದ ವೈಮನಸ್ಸಿಗೆ ಕಾರಣವಾಗಿ ಇವರಿಬ್ಬರ ನಡುವೆ ನಿರಂತರ ಯುದ್ಧಗಳು ನಡೆದು ಅಂತಿಮವಾಗಿ ಕ್ರಿ.ಶ. ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ನಿರ್ನಾಮವಾಗಿ ಹಂಪೆ ಕೊಂಪೆಯಾಯಿತು.

ಇದೇನೇ ಇರಲಿ ವಿಜಯನಗರದ ಅರಸರು ಕರ್ನಾಟಕದ ನಾಣ್ಯಲೋಕಕ್ಕೆ ನೀಡಿದಂತಹ ಕೊಡುಗೆ ಅತ್ಯದ್ಭುತವಾದುದೆಂದೇ ಹೇಳಬಹುದಾಗಿದೆ. ಅದರ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಲೇಖನದ ಮೂಲ ಆಶಯವಾಗಿದೆ.

**ನಾಣ್ಯ ಇತಿಹಾಸ ಮತ್ತು ಇತರೆ ರಾಜಮನೆತನಗಳೊಂದಿಗಿನ ಹೋಲಿಕೆ:**

ದಕ್ಷಿಣ ಭಾರತದ ನಾಣ್ಯ ಪದ್ಧತಿಗೆ ಹೊಸ ಆಯಾಮವನ್ನು ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಕಾಲವನ್ನು ನಾಣ್ಯ ಪದ್ಧತಿಯ ಸುವರ್ಣಯುಗವೆಂದು ಕರೆಯಲಾಗಿದೆ. ವಿಜಯನಗರ ಕಾಲದಲ್ಲಿ ನಾಣ್ಯ ವ್ಯವಸ್ಥೆಯನ್ನು ನೋಡಿಕೊಳ್ಳಲು ಒಂದು ವಿಭಾಗವನ್ನು ಸ್ಥಾಪಿಸಿದ್ದರು. ಇವರು ಕೇಂದ್ರ ಟಂಕಸಾಲೆಯನ್ನು ಹಂಪಿಯಲ್ಲಿ ಸ್ಥಾಪಿಸಿದರು. ಜೊತೆಗೆ ರಾಜ್ಯದ ಹಲವೆಡೆಯಲ್ಲಿ ಟಂಕಸಾಲೆಗಳನ್ನು ವ್ಯವಸ್ಥೆ ಮಾಡಿದರು ಅವುಗಳಲ್ಲಿ ಹಂಪಿ, ಬಾರಕೂರು, ಮಂಗಳೂರು, ಗಂಡಿಕೋಟೆ, ಪೆನುಕೊಂಡ,

.....೨

-೨-

ತಿರುಪೆರೆ, ಗುತ್ತಿ, ಅದೋಣಿ, ತಾಡಪತ್ತಿ, ದೇವನೂರು, ನೆಲ್ಲೂರು ಪ್ರಮುಖವಾದವು. ಕಾಲಕ್ರಮೇಣ ಕೆಲ ಸಾಮಂತ ರಾಜರುಗಳಿಗೂ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ನೀಡಿದರು. (ಉದಾಹರಣೆಗೆ ಚಿತ್ರದುರ್ಗ, ಕೆಳದಿ, ಮೈಸೂರು ಒಡೆಯರು).

ಟಂಕಸಾಲೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಟಂಕಸಾಲಾಧಿಕಾರಿ ಇದ್ದು, ಅವನು ನಾಣ್ಯಗಳ ಶುದ್ಧತೆ ಮತ್ತು ನಿಖರವಾದ ತೂಕವನ್ನು ನಿಯಂತ್ರಿಸುತ್ತಿದ್ದನು. ನಾಣ್ಯಗಳ ಪರಿಶುದ್ಧತೆಯನ್ನು ಪರೀಕ್ಷಿಸಲು ತೂಕವನ್ನು ನಿಯಂತ್ರಿಸಲು ಅಕ್ಕಸಾಲಿಗರು ಇದ್ದರು. ಅವರು ಅತೀ ಸೂಕ್ಷ್ಮವಾದ ಅಂದರೆ ಒಂದು ಕೂದಲು ತೂಕದ ವ್ಯತ್ಯಾಸವನ್ನು ಸೂಚಿಸುವ ತಕ್ಕಡಿಗಳನ್ನು ಹೊಂದಿದ್ದು, ನಾಣ್ಯಗಳ ತೂಕವನ್ನು ನಿರ್ಧಿಷ್ಟವಾಗಿ ಇರುವ ವ್ಯವಸ್ಥೆ ಮಾಡಿದರು. ಚಿನ್ನದ ನಾಣ್ಯಗಳು ಶೇಕಡಾ ೮೦-೯೦ರವರೆಗೆ ಶುದ್ಧವಾಗಿದ್ದವು. ನಕಲು ಆಗದಂತೆ ಎಚ್ಚರ ವಹಿಸುತ್ತಿದ್ದರು.

ಚಿನ್ನದ ನಾಣ್ಯಗಳು ಅವರ ಶ್ರೀಮಂತಿಕೆಯ ಸಂಕೇತವಾದರೆ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಅವರ ವೈವಿಧ್ಯತೆಗೆ ಪ್ರಖ್ಯಾತವಾಗಿವೆ. ಇವರ ನಾಣ್ಯಗಳು ದೇವ ದೇವತೆಯರ ಚಿತ್ರಣ ಮತ್ತು ಸುಂದರ ಲಿಪಿ ತಾಂತ್ರಿಕ ಹಿರಿಮೆಯಿಂದ ಕೂಡಿದ್ದು, ವಿಜಯನಗರ ಅರಸರು ನಾಣ್ಯದ ಬೆಳವಣಿಗೆಗೆ ನೀಡಿದ ಪ್ರಾಮುಖ್ಯತೆಯ ದ್ಯೋತಕವಾಗಿದೆ.

ವಿಜಯನಗರ ಅರಸರು ತಮ್ಮ ನಾಣ್ಯ ವ್ಯವಸ್ಥೆಯಲ್ಲಿ ಹೊಯ್ಸಳ, ಸೇವುಣ, ಕಾಕತೀಯ, ಬಾದಾಮಿ ಚಾಳುಕ್ಯ ಮತ್ತು ಪಾಂಡ್ಯರ ನಾಣ್ಯ ಮಾದರಿಯನ್ನು ಅನುಸರಿಸಿದರು. ಇವರು ಹೊಯ್ಸಳರ ನಾಣ್ಯಗಳ ಧಾರ್ಮಿಕ ಅಂಶಗಳನ್ನು ಉಳಿಸಿಕೊಂಡು ಗದ್ಯಾಣ, ಪಣ, ಹಾಗ, ವೀಸ, ಬೇಳೆ ಮುಂತಾದ ನಾಣ್ಯಗಳನ್ನು ಅಚ್ಚುಹಾಕಿಸಿದರು.

ಹರಿಹರನು ಹೊಯ್ಸಳರು ಮುದ್ರಿಸಿದ ದುರ್ಗೆಯ ಚಿತ್ರದ ಬದಲು ಹನುಮಂತನ ಚಿತ್ರವನ್ನು ನಾಣ್ಯದ ಮುಮ್ಮುಖದಲ್ಲಿ ಮುದ್ರಿಸಿದನು. ಬಹುಶಃ ಹನುಮಂತನು ಯಾವ ಪಂಥಕ್ಕೂ ಸೇರದ ದೇವನಾಗಿದ್ದು, ಹಿಂದೂ ಧರ್ಮದಲ್ಲಿ ಐಕ್ಯತೆ ಸಂಕೇತವಾಗಿದ್ದನು. ಈತನ ಚಿತ್ರವನ್ನು ಅನೇಕ ರಾಜಮನೆತನಗಳು ತಮ್ಮ ಧ್ವಜದಲ್ಲಿ ಬಳಸಿಕೊಳ್ಳುವುದರ ಜೊತೆಗೆ ಲಾಂಛನವನ್ನಾಗಿಯೂ ಹೊಂದಿದ್ದರು. ಹರಿಹರನು ಜನಗಳನ್ನು ಒಟ್ಟುಗೂಡಿಸಿ ಹುರಿದುಂಬಿಸಲು ಹನುಮಂತನ ಚಿತ್ರವನ್ನು ನಾಣ್ಯಗಳಲ್ಲಿ ಅಳವಡಿಸಿಕೊಂಡಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ.

ಹೊಯ್ಸಳ ದೊರೆಗಳಂತೆ ವಿಜಯನಗರ ಅರಸರು ಸಹ ನಾಣ್ಯದ ಮತ್ತೊಂದು ಮಗ್ಗುಲಲ್ಲಿ ಅವರ ಹೆಸರುಗಳನ್ನು ಕನ್ನಡ, ತೆಲುಗು ಹಾಗೂ ನಾಗರೀ ಲಿಪಿಯಲ್ಲಿ ಮುದ್ರಿಸಿದರು. ವಿಜಯನಗರ ಅರಸರು ತಮ್ಮ ಹೆಸರಿನ ಮೊದಲು ' ಪ್ರತಾಪ' ಎಂಬ ಬಿರುದನ್ನು ಮುದ್ರಿಸಿದರು. ವಿಜಯನಗರ ಪತನವಾದ ಮೇಲೆ ಅವರ ಸಾಮಂತರಾಗಿದ್ದ ಕೆಳದಿಯ ನಾಯಕರು, ಮೈಸೂರಿನ ಒಡೆಯರು ಸಹ ಇವರ ನಾಣ್ಯ ವ್ಯವಸ್ಥೆಯನ್ನು ಮುಂದುವರೆಸಿದರು. ಕೆಳದಿಯ ಅರಸರು ಸ್ವತಂತ್ರವಾಗಿ ನಾಣ್ಯಗಳನ್ನು ಮುದ್ರಿಸಲು ಪ್ರಾರಂಭಿಸಿದ ಮೇಲೆ ತಮ್ಮ ಪ್ರಭುಗಳಾದ ವಿಜಯನಗರ ಅರಸರು ಬಳಸುತ್ತಿದ್ದ 'ಪ್ರತಾಪ' ಎಂಬ ಬಿರುದಿಗೆ ಬದಲಾಗಿ 'ಶ್ರೀ' ಎಂಬುದನ್ನು ಮುದ್ರಿಸಿದರು. ಇದನ್ನು ಕೆಳದಿಯ ಸದಾಶಿವರಾಯನ ನಾಣ್ಯಗಳಲ್ಲಿ ಕಾಣಬಹುದು. ವಿಜಯನಗರವನ್ನು ಎಲ್ಲಾ ರೀತಿಯಲ್ಲೂ ಅನುಕರಿಸಿದ ಮೈಸೂರು ಒಡೆಯರು ಅವರ ನಾಣ್ಯ ವ್ಯವಸ್ಥೆಯನ್ನು ಮುಂದುವರೆಸಿ, ಅವರ ಶ್ರೇಷ್ಠತೆಯನ್ನು ಕಾಪಾಡಿದರು.

...೩

-೩-

**ವಿಜಯನಗರದ ನಾಣ್ಯಗಳು:**

ವಿಜಯನಗರದ ಅರಸರು ನಾಣ್ಯ ಚಲಾವಣೆಯಲ್ಲಿ ಒಂದು ಕ್ರಾಂತಿಯನ್ನೇ ತಂದರು. ಮೊದಲನೆಯ ಹರಿಹರನು ರಾಜ್ಯದ ಆದಾಯ ಚಿನ್ನದ ನಾಣ್ಯದ ರೂಪದಲ್ಲಿರಬೇಕೆಂಬ ಅಪೇಕ್ಷೆಯಿಂದ ಹೊಸ ಆಡಳಿತ ಸುಧಾರಣೆಯನ್ನು ಜಾರಿಗೆ ತಂದನು. ಜನರು ಕೊಡಬೇಕಾಗಿದ್ದ ತೆರಿಗೆಯನ್ನು ನಾಣ್ಯಗಳ ರೂಪದಲ್ಲಿಯೇ ಸಲ್ಲಿಸುವ ವ್ಯವಸ್ಥೆ ಮಾಡಿದನು. ಈತನು ಜನರು ತೆರಿಗೆಯನ್ನು ನಾಣ್ಯ ರೂಪದಲ್ಲಿ ಸಲ್ಲಿಸಲು ಅನುಕೂಲವಾಗಲು ವಿವಿಧ ಮೌಲ್ಯಗಳ ನಾಣ್ಯಗಳನ್ನು ಅಚ್ಚುಹಾಕಿಸಿದನು. ಜನರ ಅನುಕೂಲಕ್ಕಾಗಿ ಚಿನ್ನದ ಗದ್ಯಾಣ ಅಥವಾ ವರಹ ನಾಣ್ಯಗಳ ಜೊತೆಗೆ ಸಣ್ಣ ಮೌಲ್ಯದ ಚಿನ್ನ, ಬೆಳ್ಳಿ, ಹಾಗೂ ತಾಮ್ರದ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದನು. ಇದರಿಂದ ಚಿಕ್ಕ ಚಿಕ್ಕ ಮೌಲ್ಯದ ನಾಣ್ಯಗಳು ಹೇರಳವಾಗಿ ಬಳಕೆಗೆ ಬಂದವು. ಈ ವ್ಯವಸ್ಥೆಯನ್ನು ಮುಂದಿನ ರಾಜರುಗಳು ಮುಂದುವರೆಸಿಕೊಂಡು ಬಂದರು.

**Shikshan Sanshodhan : Journal of Arts, Humanities and Social Sciences** ISSN(o): 2581-6241
Monthly, Peer-Reviewed, Refereed, Indexed Journal Impact Factor: 6.471
Volume - 6, Issue - 9, September - 2023 Publication Date: 15/09/2023

ಕೃಷ್ಣದೇವರಾಯನು ಒರಿಸ್ಸಾದ ಗಜಪತಿಯ ಮೇಲೆ ವಿಜಯವನ್ನು ಸಾಧಿಸಿ, ಅಲ್ಲಿಂದ ಕೃಷ್ಣನ ವಿಗ್ರಹವನ್ನು ತಂದು ಹಂಪಿಯಲ್ಲಿ ಕೃಷ್ಣಸ್ವಾಮಿಯ ದೇವಸ್ಥಾನವನ್ನು ನಿರ್ಮಿಸಿ, ಪ್ರತಿಷ್ಠಾಪಿಸಿದನು. ಇದರ ಜ್ಞಾಪಕಾರ್ಥವಾಗಿ ೫೨, ೨೬ ಮತ್ತು ೧೩ ಗ್ರೇನ್ ತೂಕದ ಬಾಲಕೃಷ್ಣನ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದನು. ಈ ಬಾಲಕೃಷ್ಣನ ಬಲಗೈಯಲ್ಲಿ ಬೆಣ್ಣೆಯ ಮುದ್ದೆ ಇದೆ. ಇದು 'ಬೆಣ್ಣೆ ಮುದ್ದೆ ನಾಣ್ಯ' ಎಂದೇ ಪ್ರಸಿದ್ಧಿಯಾಗಿದೆ. ಕೃಷ್ಣದೇವರಾಯನು ತಿರುಪತಿಗೆ ಭೇಟಿ ಕೊಟ್ಟು ವೆಂಕಟೇಶ್ವರನಿಗೆ ಕನಕಾಭಿಷೇಕವನ್ನು ಮಾಡಿಸಿ, ೧೧೭ ಗ್ರೇನ್ ತೂಕದ ಅತಿ ದೊಡ್ಡ ಚಿನ್ನದ ನಾಣ್ಯವನ್ನು ಮುದ್ರಿಸಿದನು. ಇವುಗಳಲ್ಲಿ ವೆಂಕಟೇಶ್ವರನ ಚಿತ್ರವಿದ್ದು, ತಿರುಪತಿ ವರಹಗಳೆಂದು ಪ್ರಸಿದ್ಧಿಯಾಗಿವೆ.

ವಿಜಯನಗರ ಅರಸರು ಚಿನ್ನದ ಗದ್ಯಾಣ, ವರಹ, ಪೊನ್, ಪಗೋಡ, ಪ್ರತಾಪ, ಕಾಟಿ, ಪಣ, ಹಾಗ, ವೀಸ, ಬೇಳೆ, ರೂಕ ಮತ್ತು ಕಾಸುಗಳೆಂಬ ನಾಣ್ಯಗಳನ್ನು ಮುದ್ರಿಸಿದರು. ಚಿನ್ನದ ನಾಣ್ಯಗಳಾದ ಗದ್ಯಾಣ ಅಥವಾ ವರಹ ಅಥವಾ ಪೊನ್ ಹಾಗೂ ಪಗೋಡಗಳು ಹೆಚು ಮಾಲ್ಯದ ನಾಣ್ಯಗಳಾಗಿದ್ದು, ೫೨-೫೦ ಗ್ರೇನ್ ತೂಗುತ್ತಿದ್ದು, ೧೩-೧೫ ಗ್ರೇನ್ ವರೆಗೆ ಚಿಕ್ಕ ನಾಣ್ಯಗಳಿದ್ದವು. ಪೊನ್ ಎಂಬುದು ಅತಿ ಚಿಕ್ಕ ಚಿನ್ನದ ನಾಣ್ಯವಾಗಿದ್ದು, ೦-೭೫ಗ್ರೇನ್ ತೂಕವಿತ್ತು. ತಾರಾ ಎಂಬುದು ಬೆಳ್ಳಿಯ ನಾಣ್ಯ. ಇದನ್ನು ವಿದೇಶಿ ಬರಹಗಾರರು ತಾರ್, ತಾರ ಮತ್ತು ತಾರೆ ಎಂದು ಕರೆದಿದ್ದಾರೆ. ಇದರ ಮೌಲ್ಯದ ನಿರ್ದಿಷ್ಟ ಮಾಹಿತಿಗಳಿಲ್ಲ. ಇದು ಒಂದು ಪಣದ ಹದಿನಾರನೇ ಒಂದು ಭಾಗವಾಗಿರಬಹುದೆಂದು ಊಹಿಸಲಾಗಿದೆ. ಎರಡನೇ ದೇವರಾಯನ ಕಾಲದಲ್ಲಿ ಭೇಟಿ ನೀಡಿದ ಅರೇಬಿಯಾದ ಅಬ್ದುಲ್ ರಜಾಕ್ ಪ್ರಕಾರ ಆರು 'ತಾರ್' ಗಳಿಗೆ ಒಂದು ಪಣ.

ವಿಜಯನಗರ ಅರಸರು ಹೇರಳವಾಗಿ ತಾಮ್ರದ ನಾಣ್ಯಗಳನ್ನು ಮುದ್ರಿಸಿದ್ದಾರೆ. ಅವುಗಳೆಂದರೆ ಕಾಸು, ಜಿತಲ್, ಪಣಂ, ಕಾಣಿ ಮತ್ತು ಕಾಕಿಣಿ. ೨೫೦ ಗ್ರೇನ್ ಅತಿ ಹೆಚ್ಚು ತೂಕದ ತಾಮ್ರದ ನಾಣ್ಯ. ಅತಿ ಸಣ್ಣ ನಾಣ್ಯ ೧೫ ಗ್ರೇನ್ ತೂಗುತ್ತಿತ್ತು.

**ವಿಜಯನಗರ ಕಾಲದ ನಾಣ್ಯದ ಕೋಷ್ಟಕ ಚಿನ್ನದ ನಾಣ್ಯಗಳು:**

* ದೊಡ್ಡವರಹ= ದೊಡ್ಡ ಗದ್ಯಾಣ = ೨ ವರಹ = ೧೨೦ ಗ್ರೇನ್
* ಗದ್ಯಾಣ = ೧ ವರಹ = ೧ ಪೊನ್ = ಪಗೋಡ= ೫೨ ಗ್ರೇನ್
* ೧ ವರಹ = ೨ ಪ್ರತಾಪ = ೧ ಮಾಡ = ೫೨ ಗ್ರೇನ್
* ೧ ಪ್ರತಾಪ = ೨ ರಾಟಿ = ೨೬ ಗ್ರೇನ್ = ಅರ್ಧ ವರಹ
* ೧ ಕಾಟಿ = ೧೩ ಗ್ರೇನ್ = ಕಾಲುವರಹ
* ೧ ವರಹ = ೧೦ ಪಣ ( ೫-೬ ಗ್ರೇನ್)
* ೧ ಚಿನ್ನ = ೬-೫ ಗ್ರೇನ್ = ಎಂಟನೇಯ ಒಂದು ವರಹ ( ೧/೮)
* ೧ ಪಣ = ೪ ಹಾಗ = ೫-೬ ಗ್ರೇನ್
* ೧ ಹಾಗ = ೨ ಬೇಳೆ = ೧.೫ ಗ್ರೇನ್ .....೪

-೪-

**ಬೆಳ್ಳಿಯ ನಾಣ್ಯಗಳು:**

* ತಾರ್ = ತಾರ= ತೌರ್ = ಆರನೆಯ ಒಂದು (೧/೬) ಪಣ
* ತಾರ = ಹದಿನಾರನೆಯ ಒಂದು (೧/೧೬) ಪಣ
* ೧ ಕಾಣಿ = ೧೨೫ ಗ್ರೇನ್ = ೨ ಅರೆ ಕಾಣಿ
* ೧ ಜಿತಲ್ = ಮೂರನೇಯ ಒಂದು (೧/೩) ತಾರ
* ೧ ಕಾಸು = ೩೦ ಗ್ರೇನ್ = ೨ ಅರೆಕಾಸು
* ೧ ಅರೆಕಾಸು = ೧೫ ಗ್ರೇನ್

ವಿಜಯನಗರ ಅರಸರ ನಾಣ್ಯಗಳಲ್ಲಿ ಕಂಡುಬರು ಚಿತ್ರ ಹಾಗೂ ಚಿಹ್ನೆಗಳು ಧಾರ್ಮಿಕ ಸಂಬಂಧಗಳನ್ನು ಹೊಂದಿವೆ. ಇವುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹದು.

೧. ಚಿಹ್ನೆಗಳು ೨. ಪ್ರಾಣಿಗಳು ೩. ದೇವತೆಗಳು

**೧. ಚಿಹ್ನೆಗಳು:**

ಶಂಖ, ಚಕ್ರ, ಅಂಕುಶ, ಖಡ್ಗ, ಡಮರು ಹಾಗೂ ಪರಶು

**೨. ಪ್ರಾಣಿಗಳು:**

ವಿಜಯನಗರ ಅರಸರು ಪ್ರಾಣಿ ಹಾಗೂ ಪಕ್ಷಿಗಳಲ್ಲಿ ಅಪಾರ ಪ್ರೀತಿ ಹಾಗೂ ಧಾರ್ಮಿಕ ಶ್ರದ್ಧೆಯನ್ನು ಹೊಂದಿದ್ದರು. ಇದರಿಂದ ನಾಣ್ಯಗಳಲ್ಲಿ ಗರುಡ, ಸಿಂಹ, ಆನೆ, ಬಸವ(ನಂದಿ) ಗಂಡಭೇರುಂಡ, ವರಹ ಚಿತ್ರಗಳನ್ನು ಮುದ್ರಿಸಿದರು.

**೩. ದೇವತೆಗಳು :**

ವಿಜಯನಗರ ಅರಸರು ಧಾರ್ಮಿಕ ಶ್ರದ್ಧೆ ಉಳ್ಳವರಾಗಿದ್ದರು. ಇವರು ಮುದ್ರಿಸಿದ ವಿವಿಧ ದೇವತೆಗಳ ಚಿತ್ರಗಳು ಅವರ ಧಾರ್ಮಿಕ ನಂಬುಗೆಯನ್ನು ತಿಳಿಸುತ್ತವೆ. ಈ ಅರಸರು ಪರಮತಸಹಿಷ್ಣುಗಳಾಗಿದ್ದು, ವೈಷ್ಣವ ಮತ್ತು ಶೈವ ಪಂಥವನ್ನು ಅನುಸರಿಸುತ್ತಿದ್ದರೆಂಬುದು ನಾಣ್ಯಗಳಿಂದ ವ್ಯಕ್ತವಾಗುತ್ತದೆ. ಇವರು ಶಿವಪಾರ್ವತಿ, ಬ್ರಹ್ಮ-ವಿಷ್ಣು, ಲಕ್ಷ್ಮೀನರಸಿಂಹ, ವೆಂಕಟೇಶ್ವರ, ಶ್ರೀದೇವಿ ಮತ್ತು ಭೂದೇವಿಯ ಚಿತ್ರ, ಶ್ರೀರಾಮ ಮತ್ತು ಬಾಲಕೃಷ್ಣರ ಚಿತ್ರಗಳನ್ನು ಮುದ್ರಿಸಿದ್ದರು.

ತಾಂತ್ರಿಕ ಹಾಗೂ ಕಲಾತ್ಮಕ ದೃಷ್ಟಿಯಿಂದ ಪರಿಶೀಲಿಸಿದರೆ ವಿಜಯನಗರ ನಾಣ್ಯಗಳು, ಹೊಯ್ಸಳರ ನಾಣ್ಯಗಳಿಗಿಂತ ಉತ್ತಮವಾಗಿವೆ. ತಾಮ್ರದ ನಾಣ್ಯಗಳು ದಪ್ಪನಾಗಿದ್ದು, ಒರಟಾಗಿವೆ. ಇವರ ನಾಣ್ಯಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ, ದಕ್ಷಿಣ ಭಾರತ, ಮಧ್ಯಪ್ರದೇಶ, ಒರಿಸ್ಸಾ ಮತ್ತು ಮಹಾರಾಷ್ಟ್ರಗಳಲ್ಲಿ ದೊರೆತಿವೆ. ಇದರಿಂದ ವಿಜಯನಗರ ಅರಸರು ತಮ್ಮ ಅಧಿಕಾರ ಹಾಗೂ ಆರ್ಥಿಕ ಸಂಬಂಧಗಳನ್ನು ಈ ಪ್ರದೇಶಗಳಲ್ಲಿ ಹೊಂದಿದ್ದರೆಂದು ತಿಳಿಯಬಹುದು.

ವಿಜಯನಗರವನ್ನು ಆಳಿದ ವಿವಿಧ ರಾಜವಂಶಗಳು ನಾಣ್ಯಗಳಲ್ಲಿ ದೇವದೇವತೆಯರ ಚಿತ್ರಗಳನ್ನು ಮುದ್ರಿಸಿದವು. ಪ್ರಾರಂಭದಲ್ಲಿ ಸಂಗಮ ದೊರೆಗಳು ಒಂದೇ ದೇವತೆಯ ಚಿತ್ರವನ್ನು ಮುದ್ರಿಸಿದರು. ನಂತರ ಪತ್ನಿ ಸಮೇತರಾದ ದೇವತೆಗಳ ಚಿತ್ರಗಳನ್ನು ನಾಣ್ಯಗಳಲ್ಲಿ ಮುದ್ರಿಸಿದರು.

**ವಿವಿಧ ಅರಸರು ಮುದ್ರಿಸಿರುವ ದೇವ ದೇವತೆಗಳ ಚಿತ್ರಗಳು:**

**೧.** ೧ನೇ ಹರಿಹರ : ಹನುಮಾನ್, ಗರುಡ
**೨.** ೧ನೇ ಬುಕ್ಕ : ಹನುಮಾನ್, ಶಿವ-ಪಾರ್ವತಿ, ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ, ಬ್ರಹ್ಮ-ಸರಸ್ವತಿ.

-೫-

**೩.** ೨ನೇ ಬುಕ್ಕ : ನಂದಿ
**೪.** ೧ನೇ ದೇವರಾಯ: ಶಿವ-ಪಾರ್ವತಿ, ಲಕ್ಷ್ಮೀನಾರಾಯಣ, ನಂದಿ
**೫.** ವಿಜಯರಾಯ : ನಂದಿ
**೬.** ೨ನೇ ದೇವರಾಯ: ಶಿವ-ಪಾರ್ವತಿ, ಆನೆ, ಶಂಖ, ಚಕ್ರ, ಖಡ್ಗ
**೭.** ಮಲ್ಲಿಕಾರ್ಜುನ : ಆನೆ, ನರಸಿಂಹ
**೮.** ಕೃಷ್ಣದೇವರಾಯ : ವೆಂಕಟೇಶ್ವರ, ಬಾಲಕೃಷ್ಣ, ಶಿವ-ಪಾರ್ವತಿ, ಲಕ್ಷ್ಮೀನಾರಾಯಣ, ಗರುಡ.
**೯.** ಅಚ್ಯುತರಾಯ : ಗಂಡಭೇರುಂಡ
**೧೦.** ಸದಾಶಿವರಾಯ : ಶಿವ-ಪಾರ್ವತಿ, ಲಕ್ಷ್ಮೀನಾರಾಯಣ, ಗರುಡ
**೧೧.** ಸದಾಶಿವರಾಯ: ಶ್ರೀರಾಮ-ಸೀತೆ, ಶಂಖ, ಚಕ್ರ, ಗರುಡ, ವರಾಹ, ಆನೆ.
**೧೨.** ರಾಮರಾಯ : ವೆಂಟಾದ್ರಿ, ಗರುಡ
**೧೩.** ೧ನೇ ಶ್ರೀ ಗಂಗರಾಯ : ವೆಂಕಟೇಶ್ವರ
**೧೪.** ೨ನೇ ವೆಂಕಟಪತಿರಾಯ : ವೆಂಕಟೇಶ್ವರ, ಗರುಡ, ಹನುಮಾನ್
**೧೫.** ೩ನೇ ಶ್ರೀ ರಂಗರಾಯ : ನಂದಿ
**೧೬.** ೩ನೇ ವೆಂಕಟಪತಿರಾಯ : ವೆಂಕಟೇಶ್ವರ, ಶ್ರೀದೇವಿ, ಭೂದೇವಿ.
**೧೭.** ೪ನೇ ಶ್ರೀ ರಂಗರಾಯ : ವೆಂಕಟೇಶ್ವರ, ಗಣಪತಿ

ಈ ನಾಣ್ಯಗಳಲ್ಲಿ ಪ್ರಮುಖವಾಗಿ ದೇವತೆಗಳ ಪತ್ನಿಯರನ್ನು ಮುದ್ರಿಸಿ ಸ್ತ್ರೀ-ದೇವತೆಗಳಿಗೂ ಪ್ರಾಮುಖ್ಯತೆಯನ್ನು ನೀಡಿದರು. ಇವರ ಕಾಲದಲ್ಲಿ ಪುರುಷ ದೇವತೆಗಳ ಜೊತೆಯಲ್ಲಿ ಸ್ತ್ರೀ-ಶಕ್ತಿಯನ್ನು ಪೂಜಿಸುವ ಸಂಪ್ರದಾಯ ಪ್ರಾರಂಭವಾಯಿತು.

**ಉಪಸಂಹಾರ:**

ಒಟ್ಟಾರೆ ಹಿಂದೂಧರ್ಮದ ರಕ್ಷಣೆಗೋಸ್ಕರವೇ ಅಸ್ಥಿತ್ವಕ್ಕೆ ಬಂದು, ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪದ ಪೋಷಣೆಗೆ ಹಲವು ಶತಮಾನಗಳು ಶ್ರಮಿಸಿದರು, ಜೊತೆಗೆ ವೈವಿಧ್ಯಮಯ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತರುವ ಮೂಲಕ ಕರ್ನಾಟಕ ನಾಣ್ಯ ಪ್ರಪಂಚಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಇಷ್ಟೇ ಅಲ್ಲದೆ, ಅವರ ಸಾಮಂತರಾಗಿದ್ದು, ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದ ಹಲವು ಸಣ್ಣ-ಪುಟ್ಟ ರಾಜಮನೆತನದವರೂ ಕೂಡ ಹೊಸ ರೀತಿಯ ನಾಣ್ಯಗಳನ್ನು ಅಚ್ಚುಹಾಕಿಸಿ ಚಲಾವಣೆಗೆ ತರಲು ಸ್ಫೂರ್ತಿ ನೀಡುವ ಮೂಲಕ ಕರ್ನಾಟದ ನಾಣ್ಯ ಕ್ಷೇತ್ರವನ್ನು ಶ್ರೀಮಂತಗೊಳಸದ್ದರೆಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

**ಗ್ರಂಥ ಋಣ:**

೧. ದಕ್ಷಿಣ ಭಾರತದ ನಾಣ್ಯಗಳು ಎ.ಎಸ್. ಅಲ್ಟೇಕರ್ - ಸರ್ ವಾಲ್ಟರ್ ಈಲಿಯಟ್

೨. ದಕ್ಷಿಣ ಭಾರತದಲ್ಲಿ ನಾಣ್ಯ ಸಂಗ್ರಹ – ಆರ್.ಬಿ. ಜಾಕ್ಸನ್

೩. ೧೯-೨೦ನೇ ಶತಮಾನದ ಭಾರತದ ನಾಣ್ಯಗಳು- ಬಿ.ಡಿ. ಚಕ್ರವರ್ತಿ.

೪ ದಶಾಂಶ ನಾಣ್ಯಗಳು -ಭಾರತ ಸರ್ಕಾರ ಆರ್ಥಿಕ ಇಲಾಖೆ.

೫. ಕನ್ನಡ ವಿಷಯ ವಿಶ್ವಕೋಶ –ಕನ್ನಡ ಆಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ.

೬. ಕರ್ನಾಟಕದ ಪರಂಪರೆ - ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭.ಕರ್ನಾಟದಲ್ಲಿ ನಾಣ್ಯ ಮತ್ತು ನಾಣ್ಯ ಪದ್ಧತಿ - ಶ್ರೀ ಎ.ವಿ.ನರಸಿಂಹಮೂರ್ತಿ.

೮. ದಕ್ಷಿಣ ಭಾರತದ ನಾಣ್ಯಗಳು - ಬಿ.ಡಿ. ಚಟ್ಟೋಪಾಧ್ಯಾಯ – ಡಿ.ಟಿ. ದೇಶೀಕಾಚಾರ್,